**ವ್ಯಾಖ್ಯಾನ**

# <u>ನಿಜಾರ್ಥದಲ್ಲಿ ಸಂಸಾರ</u>

**Ref.**: Haridasa Hrudaya, by Dr. A.B. Shamachar, published by Srimadwagrantha Prakashana, Bengaluru – 26 (2016), page No. 120.

ಕೀರ್ತನೆಯ ಚಿಂತನೆ:

**ಸಂಸಾರವೆಂಬಂಥ ಭಾಗ್ಯವಿರಲಿ ॥ ಪ ॥**
**ಕಂಸಾರಿ ನೆನೆವೆಂಬ ಸೌಭಾಗ್ಯವಿರಲಿ ॥ ಅಪ ॥**

**ತಂದೆ ನೀನೆ ಕೃಷ್ಣ ತಾಯಿ ಇಂದಿರ ದೇವಿ**
**ಪೊಂದಿದ ಅಣ್ಣನು ವನಜಸಂಭವನು**
**ಇಂದುಮುಖಿ ಸರಸ್ವತೀ ದೇವಿಯೇ ಅತ್ತಿಗೆಯು**
**ಎಂದೆಂದಿಗೂ ವಾಯುದೇವರೆ ಗುರುವು ॥ 1 ॥**

**ಭಾರತೀ ದೇವಿಯೇ ಗುರುಪತ್ನಿಯು ಎನಗೆ**
**ಗರುಡ ಶೇಷಾದಿಗಳೆ ಗುರುಪುತ್ರರು**
**ಹರಿದಾಸರೆಂಬುವರೆ ಇಷ್ಟಬಾಂಧವರೆನಗೆ**
**ಹರಿಭಜನೆ ನಡೆಯುತಿಹ ಸ್ಥಳವೆ ಮಂದಿರವು ॥ 2 ॥**

**ಸರುವಾಭಿಮಾನವನು ತ್ಯಜಿಸುವುದೆ ಸುಸ್ನಾನ**
**ಹರಿಯನಾಮವೆ ಇನ್ನು ಅಮೃತ ಪಾನ**
**ವರದ ಪುರಂದರವಿಟ್ಠಲ ನಿನ್ನ ಪಾದ ಧ್ಯಾನ**
**ಕರುಣಿಸಿ ಅನವರತ ಕರಪಿಡಿದು ಕಾಯೊ ॥ 3 ॥**

ಸಂಸಾರವೆಂದರೆ ಹುಟ್ಟಿಬಂದ ಮನುಷ್ಯನ ಕುಟುಂಬ ಬಂಧು ಬಾಂಧವ ಪರಿವಾರ ಎಂದರ್ಥವೂ ಇದೆ. ಹೆಂಡತಿ ಮಕ್ಕಳೊಂದಿಗೆ ಎಲ್ಲರನ್ನೂ ಬೆಸೆದುಕೊಂಡು ಜೀವನ ಸಾಗಿಸುವುದೂ ಹೌದು. ಆದರೆ ದಾಸರು ಈ ಸಂಸಾರದಲ್ಲಿದ್ದರೂ ಅವರ ಚಿಂತನಾ ಕ್ರಮವು ಬೇರೆಯಾಗಿದೆ. ಸಂಸಾರವನ್ನೂ ಒಂದು

ಪವಿತ್ರವಾದ ಆಶ್ರಯಧಾಮವನ್ನಾಗಿ ಕಂಡರು. ಈ ನೆಲೆಯಲ್ಲಿ ಇದ್ದವ ನಿತ್ಯ ಸುಖದ ತಾಣವಾದ ವೈಕುಂಠದಲ್ಲಿದ್ದಂತೆ ಆಗಿಸಲು ತತ್ತ್ವಗಳನ್ನು ನಿರ್ದೇಶಿಸಿರುವರು. ಅಂದರೆ ಸೌಭಾಗ್ಯದ ಸಂಸಾರವನ್ನು ಚಿತ್ರಿಸಿದ ಸೊಬಗು ಅನುಸಂಧಾನ ಔಚಿತ್ಯಪೂರ್ಣವಾಗಿದೆ. ಸಂಸಾರದಲ್ಲಿಯ ಸದಸ್ಯರು ದೈವೀ ಸಂಪತ್ತಿನವರಾಗುತ್ತಾರೆ. ಇಲ್ಲಿ ಶ್ರೀಕೃಷ್ಣನೇ ತಂದೆ, ಲಕ್ಷ್ಮಿಯೇ ತಾಯಿ, ಚತುರ್ಮುಖ ಬ್ರಹ್ಮರೇ ಅಣ್ಣ. ಸರಸ್ವತೀ ದೇವಿಯೇ ಅತ್ತಿಗೆ. ವಾಯು-ಭಾರತೀಯರು ಗುರು ಹಾಗು ಗುರುಪತ್ನಿ. ಈ ಗುರುಗಳ ಪುತ್ರರೇ ಗರುಡ-ಶೇಷರು. ಬಂಧು ಬಾಂಧವರು ಶ್ರೀಹರಿಯ ದಾಸರು. ಇವರೆಲ್ಲರೂ ಇರುವ ಸ್ಥಳವೇ ಹರಿಭಜನೆ ನಡೆಯುವಂತಹ ಮಂದಿರ. ಇಂತಹ ಅನುಸಂಧಾನವಿದ್ದಲ್ಲಿ ಸಂಸಾರ ಸುಖಮಯ-ಸೌಭಾಗ್ಯದ ಸಂಸಾರ. ಸವಿಯುವ ಹರಿನಾಮವೇ ಅಮೃತ. ಇಂತಹ ಚಿಂತನೆ ಉಳ್ಳವನನ್ನು ಭಗವಂತ ಕರುಣಿಸುವ. ಅದಕ್ಕೆ ಕಡೆಗೆ ಪುರಂದರವಿಟ್ಠಲನನ್ನು ಕರಪಿಡಿದು ಕಾಯೋ ಎಂದು ಸಂಬೋಧಿಸಿರುವರು. ದಾಸರ ಈ ಅದ್ಭುತ ಚಿಂತನಾಲಹರಿಯನ್ನು ಎಲ್ಲ ಸುಜೀವಿಗಳು ಅನುಸಂಧಾನಕ್ಕೆ ತಂದುಕೊಳ್ಳಬೇಕು. ಇಂಥಹ ಸಂಸಾರವೆಂಬಂಥ ಭಾಗ್ಯವಿರಲಿ. ಜೀವನ ಸುಖಮಯವಾಗಿರಲಿ.

**ಲೇಖಕರು:** Dr. A. B. ಶಾಮಾಚಾರ್, ಬೆಂಗಳೂರು